ಅಧ್ಯಕ್ಷರು.—ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಬಿ ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ವಿನಂತಿ ಮಾಡುವಂಥಾದ್ದು ಏನೆಂದರೆ ವೀರಪ್ಪನ್ ವಿಷಯ ಮತ್ತು ಇತರ ವಿಷಯಗಳು ಬಂದುದರಿಂದ ಇವತ್ತು ಪ್ರಶ್ನೋತ್ತರ ಅವಧಿ ಅನಿವಾರ್ಯವಾಗಿ ಹೆಚ್ಚಾಯಿತು. ಇವತ್ತು ಅತ್ಯಂತ ಪ್ರಮುಖವಾದಂಥ ಪ್ರಶ್ನೆಗಳಿವೆ. ನಿನ್ನೆ ಪ್ರಶ್ನೋತ್ತರ ಕಾಲ ಇರಲಿಲ್ಲ. ಅನೇಕ ಪ್ರಮುಖವಾದಂಥ ಪ್ರಶ್ನೆಗಳಿಗೆ ತಾವೇ ಹೆಚ್ಚಿನ ಅವಕಾಶ ಕೊಟ್ಟುದರಿಂದ ಸಮಯ ಹೆಚ್ಚಾಗಿದೆ. ಇನ್ನೊಂದು ಪ್ರಮುಖವಾದಂಥ ಪ್ರಶ್ನೆ ಇದೆ. ಗೇಣಿದಾರರಿಗೆ ಸಂಬಂಧಪಟ್ಟಂಥ ಪ್ರಮುಖವಾದಂಥ ಪ್ರಶ್ನೆ ಕೇಳಲು ದಯಮಾಡಿ ಅವಕಾಶ ಮಾಡಿಕೊಡಿ. ದಯವಮಾಡಿ ಇದರ ಮೇಲೆ ಒಂದೇ ಒಂದು ಕ್ಲಾರಿಫಿಕೇಷನ್‌ಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸ್ವಾಮಿ, ಈ ರೀತಿಯಾದರೆ ನಾವು ಜನಗಳಿಗೆ ಏನು ಉತ್ತರ ಕೊಡುವುದು. ಬಡ ಗೇಣಿದಾರರ ಪ್ರಶ್ನೆ ಇದೆ. ಗೇಣಿದಾರರ ಜಮೀನನ್ನು ಸರ್ಕಾರದ ಕಡೆಗೆ ಸೇರಿಸಿಕೊಂಡಂಥ ಸಂದರ್ಭ ಇದೆ. ನಾವು ಏನು ಮಾಡುವುದು. ಆದ್ದರಿಂದ, ದಯಮಾಡಿ ಒಂದೇ ಒಂದು ಕ್ಲಾರಿಫಿಕೇಷನ್‌ಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರೆ, ನೀವು ಬಹಳ ಹಿರಿಯ ಸದಸ್ಯರಿದ್ದೀರಿ. ಈಗ ಗೇಣಿದಾರರ ವಿಚಾರದ ಡಿಮ್ಯಾಂಡ್ಸ್ ಬರುತ್ತದೆ ತಾನೇ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಡಿಮ್ಯಾಂಡ್ ಅಲ್ಲ, ಬಡ ಗೇಣಿದಾರರ ಜಮೀನನ್ನು ಸೇರಿಸಿಕೊಳ್ಳುತ್ತಾ ಇದ್ದಾರೆ.

ಅಧ್ಯಕ್ಷರು.—ಆ ಬೇಡಿಕೆಗೆ ಈ ಸದನ ಅಂಗೀಕಾರ ಕೊಡಬೇಕೋ ಬೇಡವೋ.

ಶ್ರೀ ಬಿ.ಎಸ್. ಯಡಿಯೂರಪ್ಪ.—೧೦ ನಿಮಿಷ ಟೈಂ ಕೊಟ್ಟಿದ್ದೀರಿ, ಇನ್ನು ಐದು ನಿಮಿಷ ಟೈಂ ಕೊಡಿ. ತಾವು ಕೊಡುವಂಥ ರೂಲಿಂಗನ್ನು ನಾನು ವಿರೋಧ ಮಾಡುವುದಿಲ್ಲ. ಇದು ಬಹಳ ಪ್ರಮುಖವಾದಂಥ ವಿಷಯ.

ಅಧ್ಯಕ್ಷರು.—ಸಾಧ್ಯ ಆಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಬೇರೆ ಪ್ರಶ್ನೆಗಳಿಗೆ ಸಾಕಷ್ಟು ಸಮಯ ಕೊಟ್ಟು ಈ ಪ್ರಶ್ನೆಯ ಕ್ಲಾರಿಫಿಕೇಷನ್‌ಗೆ ಅವಕಾಶವಿಲ್ಲ ಅಂದರೆ ಹೇಗೆ. ವೀರಪ್ಪನ್ ವಿಷಯ ಬಂದಿದ್ದಾಯಿತು, ಅರ್ಧ ಗಂಟೆ ಚರ್ಚೆಯಾಯಿತು, ಯಾವುದೂ ಬಗೆಹರಿಯಲಿಲ್ಲ. ನಾವು ಮಾಡಿದ ಅಪರಾಧ ಏನು ?

ಅಧ್ಯಕ್ಷರು.—ಅಪರಾಧ ಏನೂ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ತಮಗೆ ತುಂಬ ಗೌರವವನ್ನು ಕೊಟ್ಟು ಈ ಮಾತನ್ನು ಹೇಳುತ್ತಾ ಇದ್ದೇನೆ. ದಯಮಾಡಿ ಒಂದೆರೆಡು ಕ್ಲಾರಿಫಿಕೇಷನ್‌ಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ಸಾಧ್ಯವಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಸಭಾನಾಯಕರು ಸ್ವಲ್ಪ.....

ಅಧ್ಯಕ್ಷರು.—ಆಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಅನ್ಯಾಯವಾಗುತ್ತದೆ ಸ್ವಾಮಿ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಬಿ.ಎಸ್. ಯಡಿಯೂರಪ್ಪ.—ಇದು ಹೇಗೆ ಸರಿ ಹೋಗುತ್ತದೆ ಸ್ವಾಮಿ, ಇದು ಸರಿಯಲ್ಲ. ಬೇರೆ ಪ್ರಶ್ನೆಗಳಿಗೆ ಅವಕಾಶ ಕೊಟ್ಟು ಇದಕ್ಕೆ ಇಲ್ಲ ಅಂದರೆ ಹೇಗೆ.

ಅಧ್ಯಕ್ಷರು.—ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.